ಸ್ಯ 1902—1903ನೇ ಇಸವಿ ಅರ್ಜೀ ನಂಬರ 396.

ಅರ್ಜೀದಾರ್ರು ಮೈಸೂರಿನಲ್ಲಿರುವ ಘವತಿ ಆದ ಡಿ. ಸುಬ್ಬಯ್ಯನವರ ಮಗ ಧೂಳಿಪಟೆ ರಾಮಯ್ಯ ಮೈನರ್, ಗಾರ್ಡಿಯ್ ತಾಯಿ ಲಕ್ಷ್ಮಮ್ಮ, ಮೈನರಾದ ಧೂಳಿಪಟೆ ರಾಮಯ್ಯನವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಧೂಳಿಪಟೆ ರಾಮಯ್ಯನವರಿಗೆ ತಾಯಿ ಆಗಬೇಕೆಂಬ ಹಕ್ಕಿನಮೇಲೆ ಮೈಸೂರು ಸ್ಥಳದ ಲಕ್ಷ್ಮಮ್ಮನೆಂಬುವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1903ನೇ ಇಸವಿ ಆಗಸ್ಟು ತಾರೀಖು 14ರಲ್ಲು ವೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡೋಣಾಗಿದೆ.

ಸ್ಯ 1903ನೇ ಇಸವಿ ಜುಲೈ ತಿಂಗಳು 3ನೇ ತಾರೀಖಿನಲ್ಲಿ ಕೊರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಸಬ್ ಜಡ್ಜ್ರವರ ಕೋರ್ಟ್‌ನಲ್ಲಿ.

ಸ್ಯ 1902—1903ನೇ ಇಸವಿ ಅರ್ಜೀ ನಂಬರ 576.

ಮೃತಪಟ್ಟ ಶ್ರೀರಂಗಪಟ್ಣ ತಾಲ್ಲೂಕು ಚಂದಗಾಲು ಹೋಬಳಿ ನಗೋನಳ್ಳಿಲಿರುವ ಬೊಮ್ಮೆಗೌಡರ ಮಗ ಸುಬ್ಬೆ ಗೌಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀರಂಗಪಟ್ಣದ ತಾಲ್ಲೂಕು ಚಂದಗಾಲು ಹೋಬಳಿ ನಗೋನಳ್ಳಿಲಿರುವ ಬೊಮ್ಮೆಗೌಡರ ಮಗ ಸುಬ್ಬೆಗೌಡರ ಹೆಂಡತಿ ಲಕ್ಷ್ಮಮ್ಮ, ಮೃತಪಟ್ಟ ಸದರೀ ಸುಬ್ಬೆಗೌಡರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರ ಮೇಲೆ ಶ್ರೀರಂಗಪಟ್ಣದ ತಾಲ್ಲೂಕು ಚಂದಗಾಲು ಹೋಬಳಿ ನಗೋನಳ್ಳೀಲಿ ವಾಸಸ್ಥರಾಗಿ ಮೃತಪಟ್ಟ ಸುಬ್ಬೆಗೌಡರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೇ ಇಸವಿ VIIನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1903ನೇ ಇಸವಿ ಜುಲೈ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬೆ ಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ಯ 1903ನೇ ಇಸವಿ ಜೂ ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ವೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವರದರಾಜೈಯ್ಯಂಗಾರ್,
ಸಬ್ ಜಡ್ಜ.

ಇಸ್ತಿಹಾರ್.

ಬೆಂಗಳೂರುನಲ್ಲಿ ಇರುವ ಮೈಸೂರು ಸ್ಟೇಟ್ ಹುಜೂರು ಖಜಾನೆಯಲ್ಲಿ ಭಂಗಾರದ ಹಣಗಳು ವರಹಾಗಳು ಮತ್ತು ನಗಗಳು ಹರಾಜು ಮಾಡಲ್ಪಡುವದು.

ಮೈಸೂರು ಗೌರ್ಮೆಂಟ್ ನಂ. 16644-7—Mis. 2555, 1903ನೇ ಇಸವಿ ಮೇ ತಿಂಗಳು 23ನೇ ತಾರೀಖಿನ ಪ್ರೊಸಿಡಿಂಗ್ಸ್‌ನಲ್ಲಿ ಅಪ್ಪಣೆ ಆಗಿ ಇರುವದನ್ನು ಅನುಸರಿಸಿ ಈ ಕೆಳಗೆ ನಮೂದಿಸಿರುವ ಹಣಗಳು ವರಹಗಳು ನಗಗಳು 1903ನೇ ಇಸವಿ ಜುಲೈ ತಾರೀಖು 8ರಲ್ಲು ಮಧ್ಯಾನ್ಹ 2 ಘಂಟೆ ಲಾಗಾಯಿತು ಹರಾಜು ಮಾಡಲ್ಪಡುತ್ತೆಂದು ಈ ನೋಟಿಸ್ ಮೂಲಕ ಪ್ರಸಿದ್ಧಪಡಿಸಿ ಇರುತ್ತೆ.

ತಪಶೀಲ್.

ಜಗಲೂರು ತಾಲ್ಲೂಕು ಚಳಕಟ್ಟೆ ಗ್ರಾಮದಲ್ಲಿ ವಡ್ಡರ ಹುಲಿಯ ಎಂಬುವನು ಅವನ ಹೊಲ ಉಳುವಾಗ ದೊರಕಿದ್ದು.	(I)	441 ಭಂಗಾರದ ಹಣಗಳು, ಬೋರ್ (ಹಂದಿ ತಲೆ) ಸ್ಟ್ಯಾಂಪು ವುಳ್ಳದ್ದು.
	1	ಜೊತೆ ಭಂಗಾರದ ಕಡಗಗಳು 2—15—6 ತೂಕವುಳ್ಳದ್ದು.
	1	ಭಂಗಾರದ ಅಸಲಿ (ಕತ್ತಿನ ಆಭರಣ) ತೂಕ 1—15—0.
	1	ಡಿಟೋ ತೂಕ ರೂ. 1—0—0 ಬಂದು ಗುಲಗಂಜಿ ತೂಕ.
	2	ಭಂಗಾರದ ಉಂಗರಗಳು ತೂಕ 15 ಆಣೆಗೆ ಬಂದು ಗುಲಗಂಜಿ (ವಳಪಡಿ)-
ಹೊಳಲಕೆರೆ ತಾಲ್ಲೂಕು ಸಾಸಲ್ಲಿ ಗ್ರಾಮದಲ್ಲಿ ಸರಕಾರಿ ಸರ್ವೆ 35ನೇ ನಂಬರ ಜಮೀನಿನಲ್ಲಿ ಇರುವ ಕಲ್ಲಿನ ಬಳಿ ಜೀಗಾರಿ ಹುಡಗಿ ಚೆನ್ನಿಗೆ ದೊರಕಿದ್ದು.		67 ಭಂಗಾರದ ವರಹಾಗಳು ಅನೇಕವಾದ್ರಿವುಳ್ಳದ್ದು.

ಹರಾಜು ನಿಬಂಧನೆಗಳು.

I. ನಾಣ್ಯಗಳು ಮತ್ತು ನಗಗಳು ತೆಗದುಕೊಳ್ಳುವರು ಹರಾಜಿನ ಹಣ ನಗದು ಪಾವತಿನೂಡಿ ಪಡಿಯತಕ್ಕದ್ದು.

II. ಸವಾಲ ತಿರಸ್ಕಾರ ಮಾಡಿದ ಬಗ್ಗೆ ಕಾರಣ ತಿಳಿಯಪಡಿಸುವದಿಲ್ಲ.

III. ಹರಾಜಿನ ನಿಬಂಧನೆ ವಿಷಯದಲ್ಲಿಯೂ ಖಾಯಂಮಾಡುವ ವಿಷಯದಲ್ಲಿಯೂ ತಿರಸ್ಕರಿಸುವ ವಿಷಯದಲ್ಲಿಯೂ ಈ ಕೆಳಗೆ ರುಜು ಮಾಡಿ ಇರುವವರು ಪೂರಾ ಅಧಿಕಾರ ಪುಚ್ಚಿಸಿಕ್ಕೊಂಡು ಇರುತ್ತಾರೆ.

ಬಿ. ಗೋಪಾಲಯ್ಯಂಗಾರ್,
ಆಫೀಸರ ಇಂಚಾರ್ಜ್, ಸ್ಟೇಟ್ ಹುಜೂರ ಟ್ರೈಜರಿ.

ಬೆಂಗಳೂರ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್—ಇ ತಾರೀಖು 15ನೇ ಜೂ 1903.

ಇದೆರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ :—

			ರೂ. ಆ. ಪೈ.
1.	ಕನ್ನಡ ಲೇಖನ ಪುಸ್ತಕ	6ನೇ ನಂಬರ್	0—1—0
2.	ಡಿಟೋ	7ನೇ ಡಿಟೋ	0—1—6
3.	ಕನ್ನಡ ಬಾಲಬೋಧೆ	IIನೇ ಭಾಗ	0—2—6

ಎಸ್. ಅಬ್ದುಲ್ ಖೈ, ಕ್ಯೂರೇಟರ್.

ನೋಟಿಸ್—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹುಣಸೂರು ತಾಲ್ಲೂಕು ಪೆರಿಯಾಪಟ್ಣದಲ್ಲಿದ್ದು ಈಗ್ಗೆ ಸುಮಾರು 7–8 ತಿಂಗಳಲ್ಲಿ ಕಾಲವಾದ ಶಿವಾಚಾರದ ಹೆಮ್ಮಕ್ಕಗಾಲದ ವೀರಣ್ಣನೆಂಬುವರಿಗೆ ನಾಲ್ಕು ಜನ ಹೆಣ್ಣು ಮಕ್ಕಳ ಪೈಕಿ ಎರಡನೇ ಮಗಳನ್ನ ನನಿಗೆ ಕೊಟ್ಟು ಲಗ್ನವಾಗಿದೆ. ಮೊದಲನೇ ಮೂರು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳು ಇರುತ್ತಾರೆ. ನಾಲ್ಕನೆ ಮಗಳಿಗೆ ಹೆಣ್ಣು ಮಗಳು ಇರುತ್ತಾಳೆ. ಸದರಿ ಹೆಮ್ಮಕ್ಕಗಾಲದ ವೀರಣ್ಣನವರು ಮೂರು ಸಾವಿರ ರೂಪಾಯಿನ–ಕರ ಆಸ್ತಿಯನ್ನೂ ಮತ್ತು ಎರಡುಸಾವಿರ ರೂಪಾಯಿನ–ಸ್ಥಿರ ಆಸ್ತಿಯನ್ನೂ ಬಿಟ್ಟು ಕಾಲವಾಗಿ ಇರುತ್ತಾರೆ, ಆತನಿಗೆ ಸಾಲವೇನೂ ಇರುವದಿಲ್ಲ. ಆತನ ಹೆಂಡತಿ ಭದ್ರಕಾಳಮ್ಮನವರು ಆಸ್ತಿ ಕಲಲ್ಯಾಡುವದಕ್ಕೆ ಉಪಕ್ರಮಿಸಿ ಇದ್ದಾರೆ. ಆಕೆಯಿಂದ ಯಾವ ಸ್ವತ್ತನ್ನೂ ಯಾರೇ ಆಗಲಿ ಕ್ರಯ, ಭೋಗ್ಯ, ಆಧಾರ, ದಾನಾದಿಗಳು ಮಾಡಿಕೊಳ್ಳಕೂಡದು. ಒಂದುವೇಳೆ ಮಾಡಿಕೊಂಡರ ಅಂಥಾವುಗಳು ರದ್ದಾಗಿ ನಷ್ಟಕ್ಕೆ ಗುರಿಯಾದಾರೆಂದು ಇದರಿಂದ ಯಚ್ಚರಿಸಿದೆ.

ಮೈಸೂರು ಶ್ರೀರಾಂಪೇಟೆಯಲ್ಲಿರುವ ಪಟ್ಟದಪುರದ ನಾಗಣ್ಣನ ರುಜುವು.

Mysore Government Central Press, Bangalore—1903